ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
ಸಿಸಿ ನಂಬರ. 682/2021

ಸಿ ಡಬ್ಲ್ಯೂ-2
ಪಿ ಡಬ್ಲ್ಯೂ-2

ದಿಃ 02-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಉದಯ ನಾಯಕ
ತಂದೆಯ ಹೆಸರುಃ ವೆಂಕಟ್ರಮಣ ನಾಯಕ
ವಯಸ್ಸುಃ 58 ವರ್ಷ
ಉದ್ಯೋಗಃ ಶಿಕ್ಷರು
ವಿಳಾಸಃ ಹೊಸಕೇರಿ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಚಾಸಾ-1 ಮತ್ತು 3 ರವರ ಪರಿಚಯ ಇರುತ್ತದೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಪಿ-2 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2ಬಿ ಎಂದು ಗುರುತಿಸಲಾಯಿತು. ದಿಃ08-03-2021 ರಂದು ಶೆಟಗೇರಿ ಕ್ರಾಸ್ ಹೊಸಕೇರಿಯಲ್ಲಿರುವ ಚಾಸಾ-1 ರವರ ಮನೆಯಲ್ಲಿ ಕಳ್ಳತನದ ವಿಚಾರಕ್ಕೆ ಸಂಬಂಧಪಟ್ಟ ಪಂಚನಾಮೆಯನ್ನು ರಾತ್ರಿ 10 ರಿಂದ 11 ಗಂಟಯ ಸುಮಾರಿಗೆ ಪೊಲೀಸರು ಜರುಗಿಸಿರುತ್ತಾರೆ. ಪೊಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ನಿಪಿ-3 ರಿಂದ 5 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿತರು ತೋರಿಸಿದ ಸ್ಥಳದ ಪಂಚನಾಮೆಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-9, ಸಾಕ್ಷಿಯ ಸಹಿಯನ್ನು ನಿಪಿ-9ಎ

ಎಂದು ಗುರುತಿಸಲಾಯಿತು. ಚಾಸಾ-1 ರವರು ಪೊಲೀಸ್ ಠಾಣೆಯಿಂದ ಮನೆಗೆ ಕರೆದುಕೊಂಡು ಹೋಗಿ ಚೆಲ್ಲಾಪಿಲ್ಲಿಯಾಗಿದ್ದ ಸ್ಥಿತಿಯನ್ನು ತೋರಿಸಿರುತ್ತಾರೆ. ಸಾಕ್ಷಿಯು ತಾವು ಇರುವ 2 ಪೊಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. ದಿಃ15-07-2021 ರಂದು ಪೊಲೀಸರು ಆರೋಪಿತರನ್ನು ಚಾಸಾ-1 ರವರ ಮನೆಗೆ ಕರೆದುಕೊಂಡು ಬಂದಿದ್ದಾಗ ಅವರೇ ಕಳ್ಳತನ ಮಾಡಿದ್ದಾರೆ ಎಂದು ಗೊತ್ತಾಗಿರುತ್ತದೆ.

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಂಚನಾಮೆಗೆ ಸಂಬಂಧಪಟ್ಟು ಪಾಟೀ ಸವಾಲನ್ನು ಮಾಡಲು ಕೋರಿದ್ದು, ಅನುಮತಿಸಲಾಯಿತು.

2. ದಿಃ15-07-2021 ರಂದು ಪೊಲೀಸರು ಆರೋಪಿತರನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದು ತೋರಿಸಿದ ನಂತರ ನಿಪಿ-9 ರ ಮೇಲೆ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಆರೋಪಿತರು ತೋರಿಸಿದ ಕೃತ್ಯ ಎಸಗಿದ ಸ್ಥಳದಿಂದ ಪಂಚನಾಮೆ ಮಾಡಿ, ಪೊಟೋ ತೆಗೆದಿದ್ದು, ನಿಮ್ಮ ಸಹಿಯನ್ನು ತೆಗೆದುಕೊಂಡಿದ್ದು, ಅದೇ ನಿಪಿ-9 ಆಗಿರುತ್ತದೆ ಎಂದರೆ ಸರಿ. ಘಟನೆ ನಡೆದು ಸುಮಾರು 4 ವರ್ಷಗಳ ಕಾಲ ಆಗಿದ್ದರಿಂದ ನಿಪಿ-9 ರಲ್ಲಿ ಏನೇನು ಬರೆಯಲಾಗಿದೆ ಎಂದು ಇದ್ದಿದ್ದು ಇದ್ದಹಾಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಸಮಯ ಕೋರಿದ್ದರಿಂದ ರೂ.500/- ಖರ್ಚಿನೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.